ಶ್ರೀ ಎಸ್. ಎಚ್. ತಮ್ಮಯ್ಯ.—ಇದು 8 ವರ್ಷಗಳ ಹಿಂದೆಯೇ ಒತ್ತುವರಿಯಾಗಿದ್ದು ಈ ವಿಚಾರವನ್ನು ಹಿಂದಿದ್ದ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೂ ಮತ್ತು ಹಾಲಿ ಇರತಕ್ಕ ಮುಖ್ಯ ಮಂತ್ರಿಗಳ ಗಮನಕ್ಕೂ ತರಲಾಗಿದೆ. ಕಳೆದ ಶಿವರಾತ್ರಿಯಲ್ಲಿ ಅಲ್ಲಿ ದೇವಾಲಯದಲ್ಲಿ ಪೂಜಾ ಕಾರ್ಯ ನಡೆಯುತ್ತಿರಲಿಲ್ಲ. ಈ ಒತ್ತುವರಿಯನ್ನು ಇನ್ನು ಯಾವಾಗ ತೀರ್ಮಾನ ಮಾಡುತ್ತೀರಾ ?

Sri H. V. KOUJALGI.—The matter has been heard by my predecessor and after hearing it was found some more material was necessary and the Assistant Commissioner has been directed to make a spot inspection and report the matter. The matter is still pending and steps will be taken to finalise the matter.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಆ ಒತ್ತುವರಿ ಜಾಗ ಮುಜರಾಯಿ ಇಲಾಖೆಗೆ ಸೇರಿದ್ದೋ ಅಥವಾ ಸರ್ಕಾರಕ್ಕೆ ಸೇರಿದ್ದೋ ?

ಶ್ರೀ ಎಚ್. ವಿ. ಕೌಜಲಗಿ.—ಸರ್ಕಾರಕ್ಕೆ ಸೇರಿದ್ದು.

ಶ್ರೀ ಶಿವಣ್ಣ.—ಅಲ್ಲಿ ಆ ಒತ್ತುವರಿ ಜಾಗದಲ್ಲಿ 10 ವರ್ಷಗಳಿಂದಲೂ ಅಡಕೆ ತೋಟವನ್ನು ಬೆಳೆಸಿಕೊಂಡು ಬಂದಿದ್ದಾರೆ. ಈಗ ಅದನ್ನು ಹೇಗೆ ಬಿಡಿಸಿಕೊಳ್ಳುವುದು ?

Sri H. V. KOUJALGI.—It has not come to the notice of the Government. There is nothing on record also to show that plantation has taken place there.

ಶ್ರೀ ಎನ್. ಜಿ. ಹಾಲಪ್ಪ.—ಸರ್ಕಾರಕ್ಕೆ ಸೇರಿರತಕ್ಕ ಎಷ್ಟು ರಸ್ತೆಯನ್ನು ಆತ ಆಕ್ರಮಿಸಿದ್ದಾನೆ ? ಅಲ್ಲ ಅನಧಿಕೃತವಾಗಿ ಆತನು ಬೆಳೆಸಿರತಕ್ಕ ತೋಟದ ವಿಸ್ತೀರ್ಣವೆಷ್ಟು ? ಹಾಗೆ ಒಂದು ವೇಳೆ ಅಕ್ರಮವಾಗಿ ಆ ತೋಟವನ್ನು ಬೆಳೆಸಿರತಕ್ಕ ಜಾಗವನ್ನು ಸರ್ಕಾರದವರು ಬೇರೆ ಯಾರಿಗೂ ಕೊಡದಂಥ ಪರಿಸ್ಥಿತಿಯಿದ್ದರೆ ಆ ಭೂಮಿಯನ್ನು ಆ ರೈತನಿಗೇಕೆ ಕೊಡಬಾರದು ?

Sri H. V. KOUJALGI.—The area that is encroached is only 28 guntas. It is a fact that it is an adjacent land. But the question as to whether it should be sold in public auction or otherwise is still under consideration.

Bridges along Sagar-Kagar-Tumri Road in Sagar Taluk

164. Sri K. H. SRINIVASA (Sagar).—

Will the Minister for Public Works be pleased to state:—

(*a*) the number of bridges which are found weak and dangerous along the Sagar-Kogar-Tumri Road in Sagar Taluk ;

(*b*) the action that has been taken in respect of them ;

(*c*) whether it is not a fact that these bridges were completed only in 1964 ;

(*d*) whether any action has been taken on the officers and the contractor responsible for the bad workmanship which had caused the collapse of bridges along this road ;

(*e*) whether Government consider the introduction of a guarantee clause in Public Works Department contract agreement in view of the bad workmanship and consquent short life of some completed works ?

Sri BASAVARAJ MAGAVI (Deputy Minister for Public Works).--

(*a*) 10 bridges were found to be weak and 6 other bridges were in dangerous condition.

(*b*) 6 bridges are reconstructed and the remaining 10 bridges are repaired.

(*c*) Just before 1964.

(*d*) (i) Disciplinary action has been taken on the officers.

(ii) The Vigilance Commission has been requested to investigate into the matter further, with a view to assess the extent of responsibility of the contractors.

(*e*) The conditions of the contract provide for a maintenance period after completion.

ಶ್ರೀ ಕೆ. ಎಚ್. ಶ್ರೀನಿವಾಸ್.—ಇಲ್ಲಿ ಉತ್ತರದಲ್ಲಿ ಅಧಿಕಾರಿಗಳಮೇಲೆ ಶಿಸ್ತಿನ ಕ್ರಮವನ್ನು ಕೈಗೊಳ್ಳಲಾಗಿದೆ ಎಂದು ತಿಳಿಸಲಾಗಿದೆ. ಇದಕ್ಕೆ ಸಂಬಂಧಪಟ್ಟ ಆ ಅಧಿಕಾರಿಗಳು ಯಾರು? ಮತ್ತು ಆ ಕೆಲಸವನ್ನು ಮಾಡಿದ ಕಂಟ್ರಾಕ್ಟರು ಯಾರು? ಈ ಆಡಳಿತವರ್ಗದವರಮೇಲೆ ಸರ್ಕಾರದವರು ಕೈಗೊಂಡಿರತಕ್ಕ ಕ್ರಮಗಳೇನು?

† ಶ್ರೀ ಬಸವರಾಜ ಮಾಗವಿ.—ಈ ವಿಷಯದಲ್ಲಿ ಜಾಗ್ರತೆ ಆಯೋಗದವರಿಗೆ ಪರಿಶೀಲನೆ ನಡೆಸುವಂತೆ ಕೋರಲಾಗಿತ್ತು. ಅವರು ವಿಚಾರಣೆಯನ್ನು ನಡೆಸಿ ಒಂದು ವರದಿಯನ್ನು ಕೊಟ್ಟಿದ್ದಾರೆ. ಆ ವರದಿಯ ಪ್ರಕಾರ ಒಬ್ಬ ಎಗ್ಸಿಕ್ಯೂಟೀವ್ ಇಂಜಿನಿಯರ್ ಗೋಪಾಲಕೃಷ್ಣಶೆಟ್ಟಿ, ಈತನಿಗೆ ಸೆನ್ಸಾರ್ ಮಾಡಲಾಗಿದೆ. ಇನ್ನೊಬ್ಬ ಅಸಿಸ್ಟೆಂಟ್ ಇಂಜಿನಿಯರ್ ರಾಜಶೇಖರಯ್ಯ ಈತನಿಗೂ ಮತ್ತು ಜೂನಿಯರ್ ಇಂಜಿನಿಯರ್ ಬಿ. ಭೋಗಣ್ಣ ಇವರಿಬ್ಬರಿಗೂ ಒಂದೊಂದು ಇಂಕ್ರಿಮೆಂಟುಗಳನ್ನು ನಿಲ್ಲಿಸಲಾಗಿದೆ.

ಶ್ರೀ ಕೆ. ಎಚ್. ಶ್ರೀನಿವಾಸ್.—ಕಾಮಗಾರಿ ಪೂರೈಸಿದ ನಂತರ ಸುಸ್ಥಿತಿಯಲ್ಲರಬೇಕಾದ ಅವಧಿಯಬಗ್ಗೆ ಕಂಟ್ರಾಕ್ಟ್ ಕರಾರಿನಲ್ಲಿ ಅವಕಾಶ ಕಲ್ಪಿಸಲಾಗಿದೆ ಎಂದು ಹೇಳಲಾಗಿದೆ. ನನಗೆ ಗೊತ್ತಿರುವಹಾಗೆ ಮೂರು ತಿಂಗಳು ಕಾಲ ಕೂಡ ಈ ಕಟ್ಟಡಗಳು ಸುಸ್ಥಿತಿಯಲ್ಲಿರುವುದಿಲ್ಲವೆಂದು ಅನುಭವಕ್ಕೆ ಬಂದಿದೆ, ಇದಕ್ಕೆ ಬೇರೇನಾದರೂ ಒಂದು ಮಾರ್ಗವನ್ನು ಹುಡುಕುವುದಕ್ಕೆ ಸರ್ಕಾರದವರು ಆಲೋಚನೆ ಮಾಡಿಲ್ಲವೇ?

ಶ್ರೀ ಬಸವರಾಜ ಮಾಗವಿ.—ಪಿ. ಡಬ್ಲ್ಯು. ಕೋಡಿನಲ್ಲಿ ಅವಕಾಶವಿದೆ. ಅದನ್ನು ಕಾಂಟ್ರಾಕ್ಟಿನಲ್ಲೇ ನಮೂದಿಸಬೇಕು. ಅದರ ಬಗ್ಗೆ ಇಲ್ಲಿ ಹೀಗೆ ಹೇಳಿದೆ :—

> "In sub-section 2 of section 1 security deposit last made by a contractor shall be refunded after the expiry of three months from the date of the final bill or from the date of the contract, whichever is later."

ಹೀಗೆ ಈ ಎರಡನೇ ಭಾಗದಲ್ಲಿ ಕೇಳಿರತಕ್ಕ ಅವಧಿಯನ್ನು ನಾವಿನ್ನೂ ಹೆಚ್ಚುಮಾಡಬಹುದು.

ಶ್ರೀ ಎಚ್. ಬಿ. ಜ್ವಾಲನಯ್ಯ.—ಹೀಗೆ ಶಿಥಿಲವಾಗಿ ಹೋಗಿರತಕ್ಕ ಸೇತುವೆಗಳ ಬಗ್ಗೆ ಒಟ್ಟು ಖರ್ಚಾದ ಹಣವೆಷ್ಟು?

ಶ್ರೀ ಬಸವರಾಜ ಮಾಗವಿ.—2 ಲಕ್ಷದ 87 ಸಾವಿರ ರೂಪಾಯಿಗಳು.

ಶ್ರೀ ಚಿಕ್ಕೇಗೌಡ.—ಎಸಿಲೆನ್ಸ್ ಕಮಿಷನ್ನಿನವರು ಈ ಅಧಿಕಾರಿಗಳಮೇಲೆ ಶಿಸ್ತಿನ ಕ್ರಮ ತೆಗೆದುಕೊಂಡಿದ್ದಾರೆಂದು ಹೇಳಿದ್ದೀರಿ. ಅವನ್ನೇ ಒಪ್ಪಿಕೊಂಡಿದ್ದೀರೋ ಅಥವಾ ಇನ್ನೂ ಹೆಚ್ಚಿಗೆ ಶಿಕ್ಷೆ ಮಾಡುವುದಕ್ಕೆ ಒಪ್ಪಿದ್ದೀರೋ?

ಶ್ರೀ ಬಿ. ವಿ. ಮಾಗಾವಿ.—ಈ ವಿಚಾರವನ್ನು ವಿಜಿಲೆನ್ಸ್ ಕಮಿಷನ್ನಿಗೆ ಕಳುಹಿಸುವ ಅವಶ್ಯಕತೆ ಇರಲಿಲ್ಲ. ಟೆಕ್ನಿಕಲ್ ಆಡಿಟ್ ಸೆಲ್ ಎಂಬ ಒಂದು ಸಂಸ್ಥೆಯನ್ನು ನಿರ್ಮಾಣಮಾಡಿದ ನಂತರ ಅವರ ಶಿಫಾರಸು ಪ್ರಕಾರ ಮೂರು ಜನರಮೇಲೆ ಸರ್ಕಾರದವರು ಕ್ರಮ ತೆಗೆದುಕೊಂಡಿದ್ದಾರೆ.

Sri H. SIDDAVEERAPPA.—Does the Government feel that the punishment that is meted out to these erring officers is sufficient or proportionate to the losses incurred and whether these cases are not fit for summary dismissal ?

Sri BASAVARAJ MAGAVI.—The punishments have been imposed in accordance with the recommendations of the Technical Audit Cell. This matter has now been referred to the Vigilance Commission to further investigate as to whether those contractors could be held responsible for the losses incurred.

Sri V. N. PATIL.—In view of what has been just now stated by the Hon. Deputy Minister, I would like to know whether the intention of Government in imposing only punishments like censoring or withholding increments and not giving punishments like summary dismissal is to allow these officers to be more corrupt Sir ?

Sri BASAVARAJ MAGAVI.—I stated that the Government has carried out the recommendations of the Technical Audit Cell. Now that the matter has been referred to the Vigilance Commission and if the Vigilance Commission recommends any further action against these officers, Government will certainly take action.

ಶ್ರೀ ಎಸ್. ಎಂ. ಗುರೆಡ್ಡಿ.—ಪಿ.ಡಬ್ಲ್ಯು.ಡಿ. ಕೋಡ್ ಪ್ರಕಾರ ಕಾಮಗಾರಿ ಸುಸ್ಥಿತಿಯಲ್ಲಿರುವ ಬಗ್ಗೆ ಕಂಟ್ರಾಕ್ಟರಿಗೆ ಮೂರು ತಿಂಗಳುಗಳ ಅವಧಿ ಇರುತ್ತದೆ. ಆ ಅವಧಿ ಈಗ ಮುಗಿದಿರುವುದರಿಂದ ಈಗ ಆ ಕಂಟ್ರಾಕ್ಟರ್ ಹೇಗೆ ರೆಸ್‌ಪಾನ್ಸಿಬಲ್ ಆಗುತ್ತಾನೆ ? ಆದ್ದರಿಂದ ಇದನ್ನು ವಿಜಿಲೆನ್ಸ್ ಕಮಿಷನ್ನಿಗೆ ರೆಫರ್ ಮಾಡುವ ಕಾರಣವೇನಿದೆ ?

ಶ್ರೀ ಬಸವರಾಜ ಮಾಗಾವಿ.—ಸಾಮಾನ್ಯವಾಗಿ ೪ ತಿಂಗಳುಗಳ ಅವಧಿ ಸಾಕಾಗುತ್ತದೆಯೇ, ಇಲ್ಲವೇ ಎಂಬುದನ್ನು ನೋಡಿಕೊಳ್ಳಬೇಕು. ಆ ಕಂಟ್ರಾಕ್ಟರ್ ಇನ್ನೂ ಅನೇಕ ಕಡೆಗಳಲ್ಲಿ ಕೆಲಸ ಮಾಡುತ್ತಾನೆ. ವಿಜಿಲೆನ್ಸ್ ಕಮಿಷನ್ನಿನವರಿಂದ ಆ ರೀತಿ ಇನ್ನೂ ಹಣವನ್ನು ಹೆಚ್ಚಿಗೆ ವಸೂಲು ಮಾಡಬೇಕೆಂದು ಬಂದರೆ ಆ ಕಂಟ್ರಾಕ್ಟರ್ ಅವರಿಂದ ವಸೂಲು ಮಾಡುತ್ತೇವೆ.

ಶ್ರೀ ಕೆ. ಎಚ್. ರಂಗನಾಥ.—ಜಾಗ್ರತಾ ಅಯೋಗದವರಿಂದ ಏನು ಶಿಫಾರಸು ಬರುತ್ತದೋ ಅದರ ಪ್ರಕಾರ ಶಿಕ್ಷೆಮಾಡುತ್ತೇವೆಂದು ಮಂತ್ರಿಗಳು ಹೇಳಿದರು. ಅದಕ್ಕಿಂತಲೂ ಹೆಚ್ಚಿಗೆ ಶಿಕ್ಷೆ ಮಾಡುವುದಕ್ಕೆ ಸರ್ಕಾರಕ್ಕೆ ಅಧಿಕಾರವಿಲ್ಲವೇ ? ಸರ್ಕಾರ ಏನಾದರೂ ಮುರಾಜು ನೋಡುತ್ತಿದೆಯೇ ?

ಶ್ರೀ ಬಸವರಾಜ ಮಾಗಾವಿ.—ನಾನು ಹೇಳಿದ್ದು, ಟೆಕ್ನಿಕಲ್ ಆಡಿಟ್ ಸೆಲ್ ಆಗಲೀ ಅಥವಾ ವಿಜಿಲೆನ್ಸ್ ಕಮಿಷನ್ ಆಗಲೀ ಅವರು ಏನು ಶಿಫಾರಸು ಮಾಡುತ್ತಾರೋ ಅದನ್ನು ಕ್ಯಾರಿ ಔಟ್ ಮಾಡುವುದು ಸರ್ಕಾರದ ಕರ್ತವ್ಯವೆಂದು.

ಶ್ರೀ ವೀರೇಂದ್ರ ಪಾಟೀಲ್.—ನಾನು ಮಾನ್ಯ ಸದಸ್ಯರಿಗೆ ಈ ವಿಚಾರವಾಗಿ ಹೇಳುತ್ತೇನೆ. ಮಾನ್ಯ ಸದಸ್ಯರು ಕೇಳಿದ್ದು ಏನೆಂದರೆ, ಟೆಕ್ನಿಕಲ್ ಆಡಿಟ್ ಸೆಲ್‌ನವರೇ ಆಗಲೀ, ವಿಜಿಲೆನ್ಸ್ ಕಮಿಷನರ್ ಅವರೇ ಆಗಲೀ ಏನು ಶಿಕ್ಷೆಯನ್ನು ಶಿಫಾರಸು ಮಾಡುತ್ತಾರೋ ಅದಕ್ಕಿಂತ ಹೆಚ್ಚಿಗೆ ಸರ್ಕಾರ ಶಿಕ್ಷೆ ಕೊಡುವ ವಿಷಯ. ಆ ಅಧಿಕಾರ ಸರ್ಕಾರಕ್ಕೆ ಸಂಪೂರ್ಣವಿದೆ. ಅನೇಕ ಸಂದರ್ಭಗಳಲ್ಲಿ ಅವರು ಹೇಳಿದ ಶಿಕ್ಷೆಗೆ ಸರ್ಕಾರ ಒಪ್ಪಿಗೆ ಕೊಡುವುದರಿಂದ ಸರ್ಕಾರಕ್ಕೆ ಆ ಬಗ್ಗೆ ಅಧಿಕಾರ ಇಲ್ಲವೆಂಬ ಪ್ರಶ್ನೆಯಲ್ಲ. ಪ್ರತಿಯೊಂದು ಕಾಮಗಾರಿಯಲ್ಲಿಯೂ ಯಾರು ಯಾರು ಇಂಜಿನಿಯರುಗಳು ಕೆಲಸ ಮಾಡುತ್ತಿದ್ದಾರೆ, ಅವರು ಎಷ್ಟೆಷ್ಟರಮಟ್ಟಿಗೆ ಜವಾಬ್ದಾರರು ಎಂದು ನೋಡಿಕೊಂಡು ಶಿಕ್ಷೆ

ಕೊಡಬೇಕಾಗುತ್ತದೆ. ಕಡೆಯದು ಯಾರ ಜವಾಬ್ದಾರಿ ಇದೆ, ಯಾರಿಂದ ನಷ್ಟವಾಗಿದೆ ಎಂಬುದನ್ನು ವಿಜಿಲೆನ್ಸ್ ಕಮಿಷನ್ ಯೋಚನೆ ಮಾಡುತ್ತದೆ. ತಪ್ಪು ಕಂಟ್ರಾಕ್ಟರದು ಹೆಚ್ಚಿಗೆ ಇದ್ದರೆ ಅವರಿಂದ ಹೆಚ್ಚು ಹಣವನ್ನು ವಸೂಲುಮಾಡುವ ಜವಾಬ್ದಾರಿ ಸರ್ಕಾರಕ್ಕೆ ಇದೆ.

ಶ್ರೀ ಕೆ. ಎಚ್. ಪಾಟೀಲ್.—ಇವರಿಂದ ಆಗಿರುವಂಥ ಹಾನಿ ಏನು ಅಂದರೆ, ಚೆಕ್ಕಿಕರ್ ಆಡಿಟ್ ಸೆಲ್ ಮಾಡಿರುವುದು ಅತಿ ಕಡಿಮೆ ಶಿಕ್ಷೆಯಾಗಿದೆ. ಚೆಕ್ಕಿಕಲ್ ಆಡಿಟ್ ಸೆಲ್‌ನವರು ಅಲ್ಲೆ ಲಂಚುಗುಳಿ ತನವಾಗಿದೆಯೆಂದು ಹೇಳಿದರೆ, ಅದನ್ನು ಸರ್ಕಾರ ತನಿಖೆಮಾಡುವುದಕ್ಕೆ ಏನು ಅಡ್ಡಿ ಬರುತ್ತದೆ ?

ಶ್ರೀ ಬನವರಾಜ ಮಾಗಾವಿ.—ಇದನ್ನು ಈಗಾಗಲೇ ವಿಜಿಲೆನ್ಸ್ ಕಮಿಷನ್ನಿಗೆ ರೆಫರ್ ಮಾಡಿದ್ದೇವೆ. ಅದರ ಬಗ್ಗೆ ವಿಚಾರ ವಿನಿಮಯ ಮಾಡಿ ಹೆಚ್ಚಿನ ಶಿಕ್ಷೆ ವಿಧಿಸಬೇಕೆಂದು ಅವರು ಅಪ್ಲಾಪಿಸಿದರೆ, ಅದನ್ನು ಮಾಡುತ್ತೇವೆ.

Damage caused to Irrigation Pumpsets due to Voltage Drops and Frequent Trips on Electric Transmission Lines.

171. Sri S. PUTTASWAMY (Chamarajanagar).—

Will the Chief Minister be pleased to state :—

(*a*) the number of Irrigation pumpsets serviced in Chamarajanagar taluk up to 31st March 1969 and the number of villages and house installations electrified till 31st March 1969 in Chamarajanagar taluk ;

(*b*) the existing capacity of the Electric Sub-station in Chamarajanagar ;

(*c*) the nature and capacity of transmission lines in the taluk ;

(*d*) whether there are frequent voltage drops and trips (failure) of current in Chamarajanagar taluk ;

(*e*) whether it has come to the notice of the Government that irrigation pumpsets have been very much damaged though motor burnings due to the voltage drops, and frequent trips on the electric transmission lines ;

(*f*) the reason for such voltage drops and frequent transmission line trips ;

(*g*) the action taken by the Government to set right these defect ?

Sri D. PARAMESWARAPPA (Deputy Minister for Major Irrigation and Electricity) [on behalf of SRI VEERENDRA PATIL (Chief Minister)].—

(*a*) No. of IP Sets serviced up to 31-3-1969.	No. of Villages electrified up to 31-3-1969.	No. of house installations electrified upto 31-3-1969.
1128	111	2,686

(*b*) 2000 KVA.

(*c*) 33 KV main line. and 11 KV spur lines.